ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1276
ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ
ಉತ್ತರಿಸುವ ದಿನಾಂಕ : 24-12-2021
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕ್ರೈಸ್ಟ್ ವತಿಯಿಂದ ನಡೆಯುತ್ತಿರುವ ವಸತಿ ಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಮೂಲಭೂತ ಸೌಲಭ್ಯಗಳಾವುವು; (ವಿವರ ನೀಡುವುದು)	ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 826 ವಸತಿ ಶಾಲೆ/ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ನಿಯಮಿತವಾಗಿ ಉಚಿತವಾಗಿ ನೀಡಲಾಗುತ್ತಿರುವ ಮೂಲಭೂತ ಸೌಕರ್ಯಗಳ ವಿವರಗಳು ಈ ಕೆಳಕಂಡಂತಿವೆ. • ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನ ವ್ಯವಸ್ಥೆ ಮಾಡಲಾಗುತ್ತಿದೆ. • ಎಲ್ಲಾ ವಿದ್ಯಾರ್ಥಿಗಳಿಗೆ ಸಾಬೂನು, ಪೇಸ್ಟ್, ಕೊಬ್ಬರಿ ಎಣ್ಣೆ, ಟಾಲ್ಕಂ ಪೌಡರ್ ಇತ್ಯಾದಿ ಹೊಂದಿರುವ ಶುಚಿಸಂಭ್ರಮ ಕಿಟ್‌ಗಳನ್ನು ನೀಡಲಾಗುತ್ತಿದೆ. (ಪ್ರತಿ ತಿಂಗಳು) • ಎಲ್ಲಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್, ಶೂ ಸಾಕ್ಸ್, ಪಠ್ಯಪುಸ್ತಕ, ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿ, ಪ್ರಯೋಗಾಲಯ ಸಾಮಗ್ರಿಗಳು, ಪಾಠೋಪಕರಣಗಳು, ಕ್ರೀಡಾ ಸಾಮಗ್ರಿಗಳು, ಸಂಗೀತ ಉಪಕರಣಗಳು, ಸಿದ್ಧಪಡಿಸಿದ ಸಮವಸ್ತ್ರಗಳನ್ನು ನೀಡಲಾಗುತ್ತಿದೆ. • ಎಲ್ಲಾ ವಿದ್ಯಾರ್ಥಿಗಳಿಗೆ ಡೆಸ್ಕ್, ಬೆಂಚ್, ತಟ್ಟೆ ಲೋಟಗಳು, ಡೈನಿಂಗ್ ಟೇಬಲ್, ಟೂ ಟಯರ್ ಕಾಟ್, ಸೋಲಾರ್ ವಾಟರ್ ಹೀಟರ್, ಸಿಸಿ-ಟಿವಿ, ಇನ್ಸಿನರೇಟರ್, ಹಾಸಿಗೆ ಹೊದಿಕೆ ಮತ್ತು ದಿಂಬು ಇತ್ಯಾದಿಗಳನ್ನು ಒದಗಿಸಲಾಗುತ್ತಿದೆ. • ಎಲ್ಲಾ ವಿದ್ಯಾರ್ಥಿಗಳಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. • ದಿನಪತ್ರಿಕೆಗಳನ್ನು ಒದಗಿಸಲಾಗುತ್ತಿದೆ. • ಗ್ರಂಥಾಲಯ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. • ಆರೋಗ್ಯ ಇಲಾಖೆಯಿಂದ ಎಸ್.ಸಿ.ಎಸ್.ಪಿ ಅಡಿಯಲ್ಲಿ ವಿದ್ಯಾರ್ಥಿನಿಯರಿಗೆ ಸ್ಯಾನಿಟರಿ ಪ್ಯಾಡ್‌ಗಳನ್ನು ಒದಗಿಸಲಾಗುತ್ತಿದೆ.
ಆ)	ಮೂಲಭೂತ ಸೌಕರ್ಯಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕೆಲವೊಂದು ವಸತಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ)	ಹಾಗಾದಲ್ಲಿ, ಯಾವ ಯಾವ ಸೌಕರ್ಯಗಳ ಕೊರತೆ ಇದೆ;	ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ 826 ವಸತಿ ಶಾಲೆ/ ಕಾಲೇಜುಗಳಿಗೆ ಕಾಲಕಾಲಕ್ಕೆ ಲಭ್ಯವಿರುವ ಅನುದಾನದಲ್ಲಿ ಮೇಲೆ ತಿಳಿಸಿರುವ ಮೂಲಭೂತ ಸೌಕರ್ಯಗಳನ್ನು ಭಾಗಶಃ ಒದಗಿಸಲಾಗಿದ್ದು, ಕೊರತೆ ಇರುವ ಮೂಲಭೂತ ಸೌಕರ್ಯಗಳ ವಿವರಗಳು ಈ ಕೆಳಕಂಡಂತ್ತಿರುತ್ತದೆ. 1.ವಾಟರ್ ಪ್ಯೂರಿಫಯರ್ 2. ಟಿ.ವಿ. 3. ಸೊಳ್ಳೆಪರದೆ 4. ಶಾಲಾ ಬ್ಯಾಗ್ 5. ನರ್ಸಿಂಗ್ ಕಿಟ್ 6.ಪಾತ್ರೆ ಪರಿಕರಗಳು 7.ಜನರೇಟರ್‌ಗಳು 8.ಕಂಪ್ಯೂಟರ್ 9.ಗ್ರೈಂಡರ್ 10.ತಟ್ಟೆ ಲೋಟಗಳು 11. ಪ್ರಯೋಗಾಲಯ ಉಪಕರಣಗಳು 12. ಪಾಠೋಪಕರಣಗಳು 13.. ಪ್ರೋಜೆಕ್ಟರ್ ಮತ್ತು ಸ್ಕ್ರೀನ್ 14. ಇನ್ಸಿನರೇಟರ್ 15. ಕ್ರೀಡಾ ಸಾಮಗ್ರಿಗಳು 16. ಸಂಗೀತ ಉಪಕರಣಗಳು 17. ಡೆಸ್ಕ್ ಕಂ ಬೆಂಚ್ 18. ಟ್ರಂಕ್ 19. ಡೈನಿಂಗ್ ಟೇಬಲ್ 20. ಎಸ್ ಟೈಪ್ ಛೇರ್ 21. ಆಫೀಸ್ ಟೇಬಲ್ 22. ಅಲ್ಮೇರಾ ರ್‍ಯಾಕ್ಸ್ 23. ಸಿಸಿ ಕ್ಯಾಮರಗಳು 24. ರಾತ್ರಿ ಉಡುಪು ಮತ್ತು ಸ್ವೆಟರ್ 25. ಟು ಟಯರ್ ಕಾಟ್ 26. ಕಂಪ್ಯೂಟರ್ ಟೇಬಲ್ 27.ಕಂಪ್ಯೂಟರ್ ಛೇರ್ 28. ಗ್ಲಾಸ್ ಡೋರ್ ಅಲ್ಮೇರಾ 29. ಹಾಸಿಗೆಗಳು 30. ದಿಂಬುಗಳು 31. ಸೋಲಾರ್ ವಾಟರ್ ಹೀಟರ್ (500 ಲೀ ಸಾಮರ್ಥ್ಯ) 32.ಗಾರ್ಡನ್ ಎಕ್ವ್ಯೂಪ್‌ಮೆಂಟ್ 33. ಫ್ಲೋರ್ ಕ್ಲೀನಿಂಗ್ ಮಿಷನ್ 34. ಫ್ರೀಜರ್ 35. ಡಯಾಸ್/ ಪೋಡಿಯಂ 36. ಗ್ರೀನ್ & ವೈಟ್ ಬೋರ್ಡ್ 37. ಬಕೇಟ್ ಮತ್ತು ಜಗ್ಗು 38. ಡಸ್ಟ್ ಬಿನ್ 39. ಶೂ ರ್‍ಯಾಕ್ಸ್ 40. ಡೋರ್‌ಮ್ಯಾಟ್ಸ್ 41. ಜಮಖಾನ (ದೊಡ್ಡದ್ದು) 42. ಸೋಲಾರ್ ಸ್ಟ್ರೀಟ್ ಲೈಟಿಂಗ್ಸ್ 43. ಬೆಡ್‌ಶೀಟ್ ಮತ್ತು ಬೆಡ್‌ಸ್ಪ್ರೆಡ್.
ಈ)	ಯಾವ ಕಾಲಮಿತಿಯಲ್ಲಿ ಸದರಿ ಸೌಕರ್ಯಗಳನ್ನು ಒದಗಿಸಲಾಗುವುದು;	ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಬರುವ ವಸತಿ ಶಾಲೆ/ ಕಾಲೇಜುಗಳಿಗೆ ಅವಶ್ಯಕ ಮೂಲಭೂತ ಸೌಕರ್ಯಗಳನ್ನು ಅನುದಾನ ಲಭ್ಯತೆಗನುಗುಣವಾಗಿ ಒದಗಿಸಲಾಗುವುದು.

ಸಂಖ್ಯೆ: ಸಕಇ 566 ಮೊದೇಶಾ 2021

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.